# ವಾಹ್.. ಇಕೆಬಾನ!

ಹೂಗಳನ್ನು ಜೋಡಿಸುವ ಸಾಮಾನ್ಯ ವಿಧಾನದಲ್ಲಿ ಅವುಗಳ ವಿಧಗಳು, ಬಣ್ಣ, ಆಕಾರ ಮುಖ್ಯವಾಗುತ್ತವೆ. ವೈವಿಧ್ಯತೆ ಇದ್ದಷ್ಟೂ ಜೋಡಣೆ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ.

★ ಪದ್ಮಜಾ ಸುಂದರೇಶ್



ಹೂಗಳನ್ನು ಅಂದವಾಗಿ ಜೋಡಿಸುವ ಒಂದು ಕಲಾತ್ಮಕ ವಿಧಾನವೇ ಇಕೆಬಾನ. ಜಪಾನೀ ಭಾಷೆಯ ಪದ ಇಕೆಬಾನ, ಹೂಗಳನ್ನು ಜೀವಂತಗೊಳಿಸು ಅಥವಾ ಜೋಡಿಸು ಎಂಬ ಅರ್ಥ ಹೊಂದಿದೆ. ಜಪಾನಿನ ಈ ಅಲಂಕಾರ ವಿಧಾನವು ಪ್ರಕೃತಿ ಮತ್ತು ಮಾನವೀಯತೆಯನ್ನು ಒಟ್ಟಿಗೆ ತರುವ ಒಂದು ಪ್ರಯತ್ನವೂ ಹೌದು.

ಇಕೆಬಾನಕ್ಕೆ ಸುದೀರ್ಘ ಇತಿಹಾಸವಿದೆ. ಏಳನೇ ಶತಮಾನದಲ್ಲಿ, ಜಪಾನ್ ದೇಶಕ್ಕೆ ಬೌದ್ಧ ಧರ್ಮ ಕಾಲಿಟ್ಟಾಗ ಭಗವಾನ್ ಬುದ್ಧನನ್ನು ಪೂಜಿಸುವ ವಿಧಿಗಳಲ್ಲಿ ಹೂಗಳನ್ನು ಅರ್ಪಿಸುವುದೂ ಸೇರಿತ್ತು. ಅದರ ಫಲವಾಗಿಯೇ ಇಕೆಬಾನ ಜನ್ಮ ತಾಳಿತೆಂಬ ನಂಬಿಕೆ ಇದೆ. ಆದರೆ ಇಕೆಬಾನ ಕಲೆಯ ಅಭ್ಯಾಸ ಶಾಸ್ತ್ರೀಯವಾಗಿ ಪ್ರಾರಂಭವಾದದ್ದು ಮಾತ್ರ 15ನೇ ಶತಮಾನದಲ್ಲಿ.

ಹೂಗಳನ್ನು ಜೋಡಿಸುವ ಸಾಮಾನ್ಯ ವಿಧಾನದಲ್ಲಿ ಅವುಗಳ ವಿಧಗಳು, ಬಣ್ಣ, ಆಕಾರ ಮುಖ್ಯವಾಗುತ್ತವೆ. ವೈವಿಧ್ಯತೆ ಇದ್ದಷ್ಟೂ ಜೋಡಣೆ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಆದರೆ ಇಕೆಬಾನ, ಹೂಗಳಿಗಷ್ಟೇ ಅಲ್ಲದೆ

